8	ಹೊಲಿಗೆ ಯಂತ್ರಗಳನ್ನು ಒದಗಿಸುವುದು	1910	2416	8
9	ಹೊಲಿಗೆ ತರಬೇತಿ (ಸ್ಪೈಫಂಡ್)	4170	1115	–
10	ವಿದ್ಯಾರ್ಥಿಗಳಿಗೆ ವ್ಯಕ್ತಿ ವಿಕಾಸ ಕಾರ್ಯಗಾರ	–	1240	1240
	ಒಟ್ಟು	**15398**	**11830**	**6072**

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (125)159
2 ಸದಸ್ಯರ ಹೆಸರು : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್.ಎಸ್.
3 ಉತ್ತರಿಸುವವರು : (ಶ್ರೀ ಸುರೇಶ್ ಕುಮಾರ) ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಅ) ಗೌರಿಬಿದನೂರು ತಾಲ್ಲೂಕಿನ ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯಡಿಯಲ್ಲಿ ಪಟ್ಟಣವನ್ನು ಅಭಿವೃದ್ಧಿಪಡಿಸಲು ಯೋಜನೆ ಮಂಜೂರಾಗಿದ್ದು, ಇದುವರೆವಿಗೂ ಈ ಯೋಜನೆ ಅನುಷ್ಠಾನಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಗೆ ಸಂಬಂಧಿಸಿದಂತೆ ಗೌರಿಬಿದನೂರು ಪುರಸಭೆಯಿಂದ ಯಾವುದೇ ಪ್ರಸ್ತಾವನೆಯು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಸದರಿ ಯೋಜನೆಯು ಈ ಪಟ್ಟಣಕ್ಕೆ ಮಂಜೂರಾಗಿರುವುದಿಲ್ಲ.

ಆ) ಹಾಗಿದ್ದಲ್ಲಿ, ಈ ಯೋಜನೆಯ ವಿಳಂಬಕ್ಕೆ ಕಾರಣವೇನು?

ಅನ್ವಯಿಸುವುದಿಲ್ಲ.

ಇ) ಈ ಯೋಜನೆಯನ್ನು ಜಾರಿಗೆ ತಂದು ಅಭಿವೃದ್ಧಿಪಡಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು?

2006–07ನೇ ಸಾಲಿನಿಂದ 2010–11ನೇ ಸಾಲಿನವರೆಗೆ ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯಡಿ ಕೇಂದ್ರ ಸರ್ಕಾರವು ವಿವಿಧ ಯೋಜನೆಗಳಿಗೆ ನಿಗದಿಪಡಿಸಿದ್ದ ಅನುದಾನಕ್ಕಿಂತ ಹೆಚ್ಚಾಗಿ ಈಗಾಗಲೇ ಯೋಜನೆಗಳಿಗೆ ಮಂಜೂರಾತಿ ನೀಡಿರುವುದರಿಂದ ಗೌರಿಬಿದನೂರು ಪಟ್ಟಣವನ್ನು ಈ ಯೋಜನೆಯಡಿ ಸೇರಿಸಲು ಅವಕಾಶವಿರುವುದಿಲ್ಲ.